ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

No. 1, Unnatha Shikshana Soudha, Sheshadri Road, Bangalore – 560 001 Phone: 080 22343904, email: bngcce@kar.nic.in

ಸಂಖ್ಯೆ:ಕಾಶಿಇ/ಮಾತಂವಿ/24/ಡಿಜಿಟಲ್‌ಲರ್ನಿಂಗ್/2020-21 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,

ಬೆಂಗಳೂರು, ದಿನಾಂಕ: 26.04.2021

## ಸುತ್ತೋಲೆ

ವಿಷಯ: 2020-21 ನೇ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಡಿಜಿಟಲ್ ಕಲಿಕೆಯ ಬಗ್ಗೆ.

ಉಲ್ಲೇಖ: ಈ ಕಛೇರಿ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ 20/11/2020 ಮತ್ತು 16/04/2021

--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿಜಿಟಲ್ ಲರ್ನಿಂಗ್ ಅಡಿಯಲ್ಲಿ ಈಗಾಗಲೇ ವಿದ್ಯಾರ್ಥಿಗಳಿಗೆ ಕರ್ನಾಟಕ ಎಲ್‌ಎಂಎಸ್ ತಂತ್ರಾಂಶವನ್ನು ಒದಗಿಸಲಾಗಿರುತ್ತದೆ. ಕರ್ನಾಟಕ ಎಲ್.ಎಂ.ಎಸ್ ತಂತ್ರಾಂಶದಲ್ಲಿ ಕೇಂದ್ರೀಕೃತ ಹಾಗೂ ಟೀಚರ್ ಕಂಟೆಂಟ್ ಎಂಬ ಮಾದರಿಯಲ್ಲಿ ಎರಡು ವಿಧದ ಕಂಟೆಂಟ್ ಅನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಟೀಚರ್ ಕಂಟೆಂಟ್ ಕೂಡಾ ಕೇಂದ್ರೀಕೃತ ಕಂಟೆಂಟ್ ರೀತಿಯಲ್ಲಿ ಪಿ.ಪಿ.ಟಿ, ಸ್ಟಡಿ ಮೆಟೀರಿಯಲ್ , ವಿಡಿಯೋ ಹಾಗೂ ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಐಸಿಟಿಯುಕ್ತ ಕ್ಲಾಸ್‌ರೂಂಗಳನ್ನು ಈಗಾಗಲೇ ಅನುಸ್ಥಾಪಿಸಲಾಗಿದ್ದು, ತರಗತಿಗಳಲ್ಲಿ ಪಾಠ ಮಾಡುವಾಗ ಈ ಟೀಚರ್ ಕಂಟೆಂಟ್‌ಗಳನ್ನು ಉಪಯೋಗಪಡಿಸಿಕೊಳ್ಳತಕ್ಕದ್ದು.

ಪ್ರಸ್ತುತ ಕರ್ನಾಟಕ ಎಲ್‌ಎಂಎಸ್‌ನ Basic Version ಅನ್ನು ವಿದ್ಯಾರ್ಥಿಗಳಿಗೆ ನೀಡಲಾಗಿರುತ್ತದೆ. ಶೀಘ್ರದಲ್ಲಿಯೇ ಈ ತಂತ್ರಾಶವನ್ನು ಪೂರ್ಣಪ್ರಮಾಣದಲ್ಲಿ ನೀಡಲಾಗುವುದು. ಈ ಪೂರ್ಣ ಪ್ರಮಾಣದ ಕರ್ನಾಟಕ ಎಲ್‌ಎಂಎಸ್‌ನಲ್ಲಿ ಟೀಚರ್ ಲಾಗಿನ್ ನೀಡಲಾಗುತ್ತಿದ್ದು, ಅದರಲ್ಲಿ ಸಿದ್ಧಪಡಿಸಿಕೊಂಡಿರುವ ಟೀಚರ್ ಕಂಟೆಂಟ್‌ಗಳನ್ನು ಅಪಲೋಡ್ ಮಾಡಬೇಕಾಗಿರುವ ಅಂಶವನ್ನು ಗಮನಕ್ಕೆ ತರಲಾಗಿದೆ. ಆದ್ದರಿಂದ 2,4 ಹಾಗೂ 6ನೇ ಚಾತುರ್ಮಾಸದ ಕೇಂದ್ರೀಕೃತ ಕಂಟೆಂಟ್‌ನ್ನು ಸಿದ್ಧಪಡಿಸಲು ಗುರುತಿಸಲಾಗಿರುವ ಪ್ರಾಧ್ಯಾಪಕರುಗಳನ್ನು ಹೊರತುಪಡಿಸಿ, ಇತರ ಪ್ರಾಧ್ಯಾಪಕರುಗಳು ತಮ್ಮ ವಿಷಯಕ್ಕೆ ಸಂಬಂಧಿಸಿದಂತೆ 2,4 ಹಾಗೂ 6 ನೇ ಚಾತುರ್ಮಾಸದ ಟೀಚರ್ ಕಂಟೆಂಟ್‌ಗಳನ್ನು ಸೆಮಿಸ್ಟರ್ ಪ್ರಾರಂಭವಾಗುವುದರೊಳಗಾಗಿಅಭಿವೃದ್ಧಿಪಡಿಸಿಕೊಳ್ಳುವಂತೆ ಸೂಚಿಸಿದೆ. ಟೀಚರ್ ಲಾಗಿನ್ ನೀಡಿದ ಕೂಡಲೇ ಸಿದ್ಧಪಡಿಸಿಟ್ಟುಕೊಂಡ ಕಂಟೆಂಟ್‌ಗಳನ್ನು ಅಪ್‌ಲೋಡ್ ಮಾಡತಕ್ಕದ್ದು. ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ, ವಿದ್ಯಾರ್ಥಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ, ಯಾವುದೇ ಸಮಯ/ಸ್ಥಳದಲ್ಲಿಯಾದರೂ ಸದರಿ ಟೀಚರ್ ಕಂಟೆಂಟ್‌ನ್ನು ಉಪಯೋಗಿಸಿಕೊಳ್ಳಬಹುದಾಗಿರುವುದರಿಂದ ನಿಗದಿತ ಸಮಯದೊಳಗಾಗಿ ಗುಣಮಟ್ಟದ ಕಂಟೆಂಟ್‌ನ್ನು ಸಿದ್ಧಪಡಿಸಿಕೊಳ್ಳುವುದು ಹೆಚ್ಚಿನ ಮಹತ್ವವನ್ನು ಪಡೆದಿಕೊಂಡಿರುತ್ತದೆ.

ಈ ಕಛೇರಿಯ ಸಮಸಂಖ್ಯೆಯ ದಿನಾಂಕ:16/04/2021ರ ಸುತ್ತೋಲೆಯಲ್ಲಿ 2,4 ಹಾಗೂ 6ನೇ ಚಾತುರ್ಮಾಸದ ಕೇಂದ್ರೀಕೃತ ಕಂಟೆಂಟ್‌ನ ಸ್ವರೂಪ ಯಾವರೀತಿಯಲ್ಲಿ ಇರಬೇಕೆಂಬ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿರುತ್ತದೆ. ಅದೇ ಸೂಚನೆಗಳು ಯಥಾವತ್ತಾಗಿ ಟೀಚರ್ ಕಂಟೆಂಟ್‌ಗೆ ಕೂಡಾ ಅನ್ವಯಿಸುತ್ತದೆ. ಅದರಂತೆಯೇ, ಪಿ.ಪಿ.ಟಿ, ಸ್ಟಡಿ ಮೆಟೀರಿಯಲ್ , ವಿಡಿಯೋ ಹಾಗೂ ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಂತೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹಾಗೂ ಸುಲಭವಾಗಿ ಅರ್ಥವಾಗುವಂತೆ ಒಂದು ಘಂಟೆ ಅವಧಿಯ ಸೆಷನ್‌ಗೆ ಟೀಚರ್ ಕಂಟೆಂಟ್ ಸಿದ್ಧಪಡಿಸಿಕೊಂಡು ಕರ್ನಾಟಕ ಎಲ್‌ಎಂಎಸ್‌ನಲ್ಲಿ ನೀಡಲಾಗುವ ಟೀಚರ್ ಲಾಗಿನ್‌ನಲ್ಲಿ ಅಪಲೋಡ್ ಮಾಡತಕ್ಕದ್ದು.

ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳ ಎಲ್ಲಾ ಪ್ರಾಧ್ಯಾಪಕರುಗಳು ಟೀಚರ್ ಕಂಟೆಂಟ್ ಸಿದ್ಧಪಡಿಸುತ್ತಿರುವ ಬಗ್ಗೆ ಹಾಗೂ ಇಲಾಖಾ ವತಿಯಿಂದ ಕೇಂದ್ರೀಕೃತ ಕಂಟೆಂಟ್ ಸಿದ್ಧಪಡಿಸಲು ಗುರುತಿಸಲಾಗಿರುವ ಪ್ರಾಧ್ಯಾಪಕರುಗಳು ಸದರಿ ಕಂಟೆಂಟ್ ಅನ್ನು ಸಿದ್ಧಪಡಿಸುತ್ತಿರುವ ಬಗ್ಗೆ ಕೂಡಾ ಮೇಲ್ವಿಚಾರಣೆ ಮಾಡಿ ವಾರಕ್ಕೊಮ್ಮೆ ತಮಗೆ ನೀಡಿರುವ ಗೂಗಲ್ ಫಾರಂನಲ್ಲಿ ಪ್ರಾದೇಶಿಕ ಜಂಟಿನಿರ್ದೇಶಕರಿಗೆ ಪ್ರಗತಿ ವರದಿ ನೀಡತಕ್ಕದ್ದು. ಟೀಚರ್ ಕಂಟೆಂಟ್‌ನ್ನು ನಿಗದಿತ ಅವಧಿಯೊಳಗೆ ಅಭಿವೃದ್ಧಿಪಡಿಸದ ಪಕ್ಷದಲ್ಲಿ, ಪ್ರಾಂಶುಪಾಲರುಗಳೇ ಪೂರ್ಣ ಜವಾಬ್ದಾರರಾಗಿರುತ್ತಾರೆಂದು ತಿಳಿಸಲಾಗಿದೆ.

ವಿಶೇಷ ಸೂಚನೆ: ಕೇಂದ್ರೀಕೃತ ಕಂಟೆಂಟ್ ಸಿದ್ಧಪಡಿಲು ಗುರುತಿಸಿರುವ ಪ್ರಾಧ್ಯಾಪಕರುಗಳು ತಮ್ಮ ಕಂಟೆಂಟ್ ತಯಾರಿಕೆಯ ಅಂಕಿ ಅಂಶಗಳಮಾಹಿತಿಯನ್ನು ಪ್ರತಿದಿನ ಅಪರಾಹ್ನ 3.00 ರೊಳಗಾಗಿ ತಮಗೆ ನೀಡಿರುವ ಗೂಗಲ್ ಫಾರಂನಲ್ಲಿ ಭರ್ತಿ ಮಾಡತಕ್ಕದ್ದು. ಜಂಟಿ ನಿರ್ದೇಶಕರ ಕಛೇರಿಯಲ್ಲಿ ನಿಯುಕ್ತಿಗೊಳಿಸಿರುವ ವಿಶೇಷಾಧಿಕಾರಿಗಳು ಇದನ್ನು ಪರಿಶೀಲಿಸಿ ಕೇಂದ್ರಕಛೇರಿಯ ಎಲ್‌ಎಂಎಸ್ ನೋಡಲ್ ಅಧಿಕಾರಿಗಳಿಗೆ ವರದಿ ಮಾಡತಕ್ಕದ್ದು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರು

ಇವರಿಗೆ,

1) ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಮಾಹಿತಿಗಾಗಿ ಮತ್ತು ತಮ್ಮ ಕಾಲೇಜಿನ ಎಲ್ಲಾ ಪ್ರಾಧ್ಯಾಪಕರುಗಳ ಗಮನಕ್ಕೆ ತಂದು, ತುರ್ತಾಗಿ ಟೀಚರ್ ಕಂಟೆಂಟ್ ಸಿದ್ಧಪಡಿಸಲು ತೊಡಗಿಸಿಕೊಳ್ಳುವಂತೆ ಸೂಚನೆ ನೀಡುವುದು

2) ವಿಶ್ವವಿದ್ಯಾಲಯವಾರು/ವಿಷಯವಾರು ಕೇಂದ್ರೀಕೃತ ಕಟೆಂಟ್ ಸಿದ್ಧಪಡಿಸಲು ಗುರುತಿಸಲಾಗಿರುವ ಪ್ರಾಧ್ಯಾಪಕರುಗಳಿಗೆ -ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ.:

1) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಗುಲ್ಬರ್ಗಾ- ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ 2) ಕಛೇರಿ ಪ್ರತಿ